# ಶ್ರೀರಾಮಕೃಷ್ಣ ವಚನವೇದದಿಂದ



## ಸಚ್ಚಿದಾನಂದ

**ಯಾ**ವ ಧರ್ಮವೇ ಆಗಲಿ, ಯಾವ ಮತವೇ ಆಗಲಿ ಎಲ್ಲವೂ ಆ ಒಬ್ಬ ಭಗವಂತನನ್ನೇ ಕರೆಯುವಂತೆ ತಮ್ಮ ತಮ್ಮ ಅನುಯಾಯಿಗಳನ್ನು ಪ್ರೇರಿಸುತ್ತವೆ. ಆದ್ದರಿಂದ ಯಾವ ಧರ್ಮವನ್ನೇ ಆಗಲಿ, ಯಾವ ಮತವನ್ನೇ ಆಗಲಿ, ಅಶ್ರದ್ಧೆಯಿಂದ ನೋಡಕೂಡದು, ದ್ವೇಷಿಸಕೂಡದು. ಆ ಒಬ್ಬ ಭಗವಂತನನ್ನೇ ವೇದಗಳು ಸಚ್ಚಿದಾನಂದ ಬ್ರಹ್ಮ ಎಂತಲೂ, ಭಾಗವತಾದಿ ಪುರಾಣಗಳು ಸಚ್ಚಿದಾನಂದ ಕೃಷ್ಣ ಅಂತಲೂ, ತಂತ್ರಶಾಸ್ತ್ರ ಶಿವ ಅಂತಲೂ ಕರೆಯುತ್ತವೆ. ನಿಜವಾಗಿ ಇರುವವನು ಕೇವಲ ಆ ಸಚ್ಚಿದಾನಂದನೊಬ್ಬನೇ.

ಸಚ್ಚಿದಾನಂದನ ಸಾಕ್ಷಾತ್ಕಾರ ಆಯಿತು ಎಂದರೆ ಸಮಾಧಿ ಉಂಟಾಗುತ್ತದೆ. ಬಳಿಕ ಕರ್ಮತ್ಯಾಗವಾಗಿಬಿಡುತ್ತದೆ. ನಾನು ಸಂಗೀತ ವಿದ್ವಾಂಸನ ಸಂಬಂಧವಾಗಿ ವರ್ಣಿಸುತ್ತಿರುವಾಗ ಆತನೇ ಬಂದುಬಿಟ್ಟರೆ ಇನ್ನು ಆತನ ವಿಷಯವಾಗಿ ವರ್ಣಿಸುವ ಆವಶ್ಯಕತೆ ಯೇನಿದೆ? ಜೇನುಹುಳು ಎಲ್ಲಿಯವರೆಗೆ ಝೇಂಕರಿಸುತ್ತಿರುತ್ತದೆ? ಹೂವಿನ ಮೇಲೆ ಕೂಡದವರೆಗೆ. ಆದರೆ, ಸಾಧಕ ಕರ್ಮತ್ಯಾಗಮಾಡ ಕೂಡದು. ಪೂಜೆ, ಜಪ, ಧ್ಯಾನ, ಸಂಧ್ಯಾವಂದನೆ, ತೀರ್ಥಯಾತ್ರೆ ಇದನ್ನೆಲ್ಲಾ ಮಾಡಲೇ ಬೇಕು. ಸಚ್ಚಿದಾನಂದನ ಸಾಕ್ಷಾತ್ಕಾರ ಆದ ಮೇಲೂ ಯಾರೇ ಆಗಲಿ ವಿಚಾರದಲ್ಲಿ ತೊಡಗಿರುವುದು ಕಂಡು ಬಂದರೆ, ಅವರನ್ನು ಜೇನು ಹುಳುವಿಗೆ ಹೋಲಿಸಬಹುದು. ಜೇನು ಹುಳು ಜೇನು ಕುಡಿಯುತ್ತಿರುವಾಗಲೂ ಒಮ್ಮೊಮ್ಮೆ 'ಗುಯ್ಙ್, ಗುಯ್ಙ್' ಅಂತ ಶಬ್ದ ಮಾಡುತ್ತದೆ.

ಭಗವಂತ ಕೇವಲ ಸಾಕಾರ ಅಂತ ಹೇಳಿಬಿಟ್ಟರೆ ಹೇಗಾದೀತು? ಭಗವಂತ ಶ್ರೀಕೃಷ್ಣನ ರೂಪದಲ್ಲಿ ಬಂದಿದ್ದ ಹಾಗೆ, ಮನುಷ್ಯ ದೇಹಧಾರಣೆ ಮಾಡಿಕೊಂಡು ಬರುತ್ತಾನೆ ಎಂಬುದು ಖಂಡಿತ ಸತ್ಯ. ವಿವಿಧ ರೂಪಗಳನ್ನು ಧರಿಸಿ ಭಕ್ತರಿಗೆ ಗೋಚರನಾಗುತ್ತಾನೆ ಎಂಬುದೂ ಸತ್ಯ. ಆದರೆ ಆತ ನಿರಾಕಾರ ಎಂಬುದೂ ಸತ್ಯ; ಆತ ಅಖಂಡ ಸಚ್ಚಿದಾನಂದ ಬ್ರಹ್ಮ. ವೇದದಲ್ಲಿ ಹೇಳಿದೆ, ಆತ ಸಾಕಾರ ನಿರಾಕಾರ ಎರಡೂ ಎಂದು. ಇದು ಹೇಗೆ ಗೊತ್ತೆ? ಸಚ್ಚಿದಾನಂದ ಅನಂತ ಸಾಗರವಿದ್ದ ಹಾಗೆ. ಶೈತ್ಯದ ದೆಸೆಯಿಂದ ನೀರು ಹಿಮಕಟ್ಟಿ ವಿವಿಧ ಹಿಮಗಡ್ಡೆಗಳ ರೂಪ ತಾಳಿ ಸಾಗರದ ನೀರಿನಲ್ಲಿ ತೇಲಾಡು ತ್ತಿರುತ್ತದೆ. ಅದೇ ರೀತಿಯಾಗಿ ಭಕ್ತಿ ಎಂಬ ಶೈತ್ಯದ ದೆಸೆಯಿಂದ ಸಚ್ಚಿದಾನಂದ ಸಾಗರದಲ್ಲಿ ಭಗವಂತನ ಅನೇಕ ರೂಪಗಳನ್ನು ನೋಡಬಹುದು. ಆಕಾರಗಳು ಭಕ್ತರಿಗಾಗಿ ಮಾತ್ರವೇ. ಆದರೆ ಜ್ಞಾನ ಸೂರ್ಯ ಉದಯಿಸಿದ ಎಂದರೆ ಹಿಮಗಡ್ಡೆಗಳೆಲ್ಲಾ ಕರಗಿ ಎಂದಿನಂತೆ ನೀರಾಗುತ್ತವೆ. ಮೇಲೆ ನೀರು, ಕೆಳಗೆ ನೀರು, ಎಲ್ಲೆಲ್ಲೂ ನೀರೇ ನೀರು. ಇದಕ್ಕಾಗಿಯೇ ಶ್ರೀಮದ್ಭಾಗವತದ ಒಂದು ಸ್ತೋತ್ರ ಹೇಳುತ್ತದೆ: "ಹೇ ಭಗವಂತ, ನೀನೇ ನಿರಾಕಾರ. ನಮ್ಮ ಮುಂದೆ ನೀನು ಮನುಷ್ಯರೂಪ ಧರಿಸಿ ಸುತ್ತಾಡುತ್ತಿದ್ದೀಯೆ; ಆದರೆ ವೇದ ದಲ್ಲಿ ನಿನ್ನನ್ನೇ ವಾಙ್ಮನಾತೀತ ಎಂಬುದಾಗಿ ಹೇಳಿದೆ." ಆದರೆ ನೀವು ಹೇಳಬಹುದು, ಕೆಲಕೆಲವು ಭಕ್ತರಿಗಾಗಿ ಭಗವಂತ ನಿತ್ಯ ಸಾಕಾರ ರೂಪ ತಾಳುತ್ತಾನೆ ಎಂಬುದಾಗಿ. ಸಾಗರದಲ್ಲಿ ಕೆಲವು ಸ್ಥಳಗಳಿವೆ; ಅಲ್ಲಿ ಹಿಮಗಡ್ಡೆ ಕರಗುವುದೇ ಇಲ್ಲ. ಅಲ್ಲಿ ಅದು ಸ್ಫಟಿಕಾಕಾರವನ್ನು ತಾಳುತ್ತದೆ.

ಕೇವಲ ಸಚ್ಚಿದಾನಂದನೇ ಗುರು. ಮನುಷ್ಯ ಗುರುವಿನ ಪಟ್ಟ ಧರಿಸಿ ಜನರಲ್ಲಿ ಆತ್ಮಜಾಗೃತಿಯನ್ನುಂಟುಮಾಡಿದ್ದೇ ಆದರೆ, ಆಗ ತಿಳಿದುಕೊಳ್ಳಬೇಕು ಸಚ್ಚಿದಾನಂದನೇ ಆ ರೂಪ ಧರಿಸಿದ್ದಾನೆ ಎಂಬುದಾಗಿ. ಗುರು ಒಬ್ಬ ಸ್ನೇಹಿತ ಇದ್ದಹಾಗೆ. ಆತ ಕೈಹಿಡಿದು ಕರೆದುಕೊಂಡು ಹೋಗುತ್ತಾನೆ. ಭಗವಂತನ ದರ್ಶನವಾದನಂತರ ಗುರು-ಶಿಷ್ಯರ ಭೇದವಿರದು. ಅದು ಬಹಳ ತೊಡಕಿನ ಸನ್ನಿವೇಶವನ್ನು ಸೃಜಿಸುತ್ತದೆ. ಅಲ್ಲಿ ಗುರು-ಶಿಷ್ಯರು ಒಬ್ಬರನ್ನೊಬ್ಬರು ಗುರುತಿಸ ಲಾರರು. ಇದಕ್ಕಾಗಿಯೆ ಜನಕರಾಜ ಶುಕದೇವನಿಗೆ ಹೇಳಿದ: "ನಿನಗೆ ಬ್ರಹ್ಮಜ್ಞಾನ ಬೇಕಾಗಿದ್ದರೆ, ಮೊದಲು ಗುರುದಕ್ಷಿಣೆ ಕೊಡು." ಏಕೆಂದರೆ, ಸಚ್ಚಿದಾನಂದ ಸಾಗರದಲ್ಲಿ ಮುಳುಗಿದ ನಂತರ ಈತ ಗುರು, ತಾನು ಶಿಷ್ಯ ಎಂಬ ಭೇದ ಬುದ್ಧಿ ಇರದು. ಸಚ್ಚಿದಾನಂದ ಸಾಕ್ಷಾತ್ಕಾರವಾಗದವರೆಗೆ ಮಾತ್ರ ಗುರು-ಶಿಷ್ಯ ಸಂಬಂಧ.

ಜ್ಞಾನಿ ತನ್ನ ಅಂತರ್ಯದಲ್ಲಿ ಭಗವದಾನಂದವನ್ನು ಅನು ಭವಿಸುತ್ತಾನೆ. ಸಮುದ್ರಮಟ್ಟಕ್ಕಿಂತ ಎತ್ತರದಲ್ಲಿ ಹರಿಯುವ ಗಂಗೆಯ ಹಾಗೆ ಅದು ಒಂದೇ ದಿಕ್ಕಿಗೆ ಹರಿಯುತ್ತದೆ. ಅವರ ದೃಷ್ಟಿಯಿಂದ ಎಲ್ಲ ಸ್ವಪ್ನದ ಹಾಗೆ. ಯಾವಾಗಲೂ ಸ್ವಸ್ವ ರೂಪದಲ್ಲೇ ನೆಲೆಸಿರುತ್ತಾರೆ. ಆದರೆ ಭಕ್ತನ ಮನಸ್ಸು ಯಾವಾ ಗಲೂ ಒಂದೇ ದಿಕ್ಕಿನದಲ್ಲ. ಆತನ ಭಗವದ್ಭಾವನೆಯಲ್ಲಿ ಉಬ್ಬರ ಇಳಿತಗಳಿವೆ. ಆತ ಪ್ರೇಮೋನ್ಮಾದದಿಂದ ನಗುತ್ತಾನೆ, ಅಳುತ್ತಾನೆ, ನರ್ತಿಸುತ್ತಾನೆ, ಹಾಡುತ್ತಾನೆ. ಆತ ಭಗವಂತನೊಡನೆ ವಿಲಾಪಿಸಲು ಇಚ್ಛೆಪಡುತ್ತಾನೆ. ಸಾಗರದಲ್ಲಿ ಹಿಮಗಡ್ಡೆ ಮುಳುಗಿ ಎದ್ದು ತೇಲಿ ಮಾಡುವುದಿಲ್ಲವೆ, ಹಾಗೆಯೆ ಆತ ಭಗವದಾನಂದ ಸಾಗರದಲ್ಲಿ ಕೆಲವು ವೇಳೆ ಮುಳುಗುತ್ತಾನೆ, ಮತ್ತೆ ಕೆಲವು ವೇಳೆ ಏಳುತ್ತಾನೆ. ಜ್ಞಾನಿಗಳಿಗೆ ಬ್ರಹ್ಮ ಸಾಕ್ಷಾತ್ಕಾರ ಬೇಕು. ಆದರೆ ಭಕ್ತರ ಆದರ್ಶ ಷಡೈಶ್ವರ್ಯಪೂರ್ಣ ಸರ್ವಶಕ್ತಿಮಾನ್ ಸಾಕಾರ ಭಗವಂತ. ಆದರೆ ವಾಸ್ತವಿಕವಾಗಿ ಬ್ರಹ್ಮನಿಗೂ ಶಕ್ತಿಗೂ ಯಾವ ಭೇದವೂ ಇಲ್ಲ. ಯಾರು ಸಚ್ಚಿದಾನಂದನೋ ಆತನೇ ಸಚ್ಚಿದಾನಂದಮಯಿ. ಅವರು ರತ್ನ ಮತ್ತು ಅದರ ಪ್ರಭೆ ಇದ್ದಹಾಗೆ. ರತ್ನದ ಭಾವನೆಯೊಡನೆ ರತ್ನಪ್ರಭೆಯೂ ಮನಸ್ಸಿಗೆ ಬರುತ್ತದೆ; ರತ್ನವನ್ನು ಭಾವಿಸದೆ ರತ್ನ ಪ್ರಭೆಯನ್ನು ಭಾವಿಸಲಾಗುವುದಿಲ್ಲ. ರತ್ನಪ್ರಭೆಯನ್ನು ಭಾವಿಸದೆ ರತ್ನವನ್ನು ಭಾವಿಸಲಾಗುವುದಿಲ್ಲ.